ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್
ನೊಂದಾಯಿತ ಕಛೇರಿ: 1ನೇ ಮಹಡಿ, ಪಾಲಿಕೆ ಕಟ್ಟಡ ಬ್ಲಾಕ್,
ಎಸ್.ಎನ್ ಮಾರ್ಕೆಟ್, ನೆಹರು ರಸ್ತೆ, ಶಿವಮೊಗ್ಗ – 577201

Shivamogga

SHIVAMOGGA SMART CITY LIMITED
Regd Office: 1st Floor, Corporation Building block,
SN Market, Nehru Road, Shivamogga – 577201
CIN: U74999KA2017PLC100268, GSTIN: 29AAYCS3808B1Z0, PAN: AAYCS3808B, TAN: BLRS63059D
Web: http://shivamoggasmartcity.in/ E-mail: shimogasmartcity@gmail.com Phone No: 08182-279951

No:SSCL/TECH/PBT/19/CE-MOM-32/2019-20/33 Date:14.05.2020

**ಮುಖ್ಯ ಅಭಿಯಂತರರು ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ ರವರ ಅಧ್ಯಕ್ಷತೆಯಲ್ಲಿ ದಿನಾಂಕ:- 08.05.2020 ರಂದು ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ Improvement and Beautification of Private bus terminal ಅಂದಾಜು ಪಟ್ಟಿಯ ಮರು ಪರಿಶೀಲನಾ ಸಭೆಯ ನಡುವಳಿಗಳು.**

**ಸಭೆಯಲ್ಲಿ ಹಾಜರಿದ್ದವರು:**

1. ಶ್ರೀ.ವಿಜಯಕುಮಾರ್ ಎ.ವಿ, ಕಾರ್ಯಪಾಲಕ ಅಭಿಯಂತರರು-1 ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ.
2. ಶ್ರೀ ಪ್ರಾಣೇಶ್ ಪಿ.ಟಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ
3. ಶ್ರೀ ಶಶಿಧರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ
4. ಶ್ರೀ ಯಶವಂತ್ ನಾಯಕ್ ಸಹಾಯಕ ಕಾರ್ಯಪಾಲಕ ಅಭಿಯಂತರರು ಮೆಸ್ಕಾಂ (O&M) ಇಲಾಖೆ ,ಶಿವಮೊಗ್ಗ ರವರು ಹಾಜರಿದ್ದರು
5. ಶ್ರೀ. ರವೀಂದ್ರ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನೀರು ಸರಬರಾಜು ಮಂಡಳಿ (ಒಳಚರಂಡಿ) ಉಪವಿಭಾಗ ಶಿವಮೊಗ್ಗ.
6. ಕುಮಾರಿ ಕವನಾ ಟಿ ಡಿ , ಸಹಾಯಕ ಅಭಿಯಂತರರು, ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ
7. ಯೋಜನಾ ತಯಾರಕರು, ಟಾಟಾ ಕನ್ಸಲ್ಟಿಂಗ್ ಇಂಜಿನಿಯರ್ಸ್ ಶಿವಮೊಗ್ಗ

ಮುಖ್ಯ ಅಭಿಯಂತರರವರು, ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ ಸಭೆಯಲ್ಲಿ ಹಾಜರಿದ್ದವರಿಗೆ ಸ್ವಾಗತ ಕೋರಿದರು.

ಕಾರ್ಯಪಾಲಕ ಅಭಿಯಂತರರು ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ ರವರು ಈ ಹಿಂದೆ ನಡೆದ ಸಭೆಯ ನಡುವಳಿಗಳನ್ನು ಸಭೆಯಲ್ಲಿ ಹಾಜರಿದ್ದವರಿಗೆ ವಿವರಿಸಿದರು ಹಾಗೂ ಈ ಹಿನ್ನೆಲೆಯಲ್ಲಿ PMC ರವರು ಸಲ್ಲಿಸಿರುವ ಪರಿಷ್ಕೃತ ಅಂದಾಜು ಪಟ್ಟಿ ರೂ 6.85 ಕೋಟಿಯ ವಿವರಗಳನ್ನು ಸಭೆಯ ಗಮನಕ್ಕೆ ತರಲಾಯಿತು.

ಈ ಕೆಳಗಿನ ಅಂಶಗಳನ್ನು ಹಾಜರಿದ್ದ ಅಧಿಕಾರಿಗಳ ಸಮ್ಮುಖದಲ್ಲಿ ಚರ್ಚಿಸಿದಂತೆ ಒಮ್ಮತದ ನಿರ್ಧಾರದೊಂದಿಗೆ ಪರಿಷ್ಕೃತ ಅಂದಾಜಿನಲ್ಲಿ ಈ ಕೆಳಗಿನ ಅಂಶಗಳನ್ನು ಪರಿಗಣಿಸಿ ತಯಾರಿಸಲು ಹಾಜರಿದ್ದ ಯೋಜನಾ ತಯಾರಕರು, ಟಾಟಾ ಕನ್ಸಲ್ಟಿಂಗ್ ಇಂಜಿನಿಯರ್ಸ್ ಶಿವಮೊಗ್ಗ ರವರಿಗೆ ಸೂಚಿಸಲಾಯಿತು.

1. ಪ್ರಯಾಣಿಕರು ಓಡಾಡುತಿತರುವುದರಿಂದ ಅಂಗಡಿ ಮಳಿಗೆಗಳ ಮುಂದೆ UGD ಲೈನ್ ನಲ್ಲಿ ಅಳವಡಿಸಿರುವ ಮ್ಯಾನ್ ಹೋಲ್ ಮುಚ್ಚಳದ ಮೇಲೆ 2 ಅಡಿ ವ್ಯಾಸಕ್ಕೆ ಗ್ರಾನೈಟ್ ನಿಂದ ನಿರ್ಮಿಸಿ ಅದಕ್ಕೆ 2 ರಂಧ್ರಗಳೊಂದಿಗೆ ಸರಾಗವಾಗಿ ತೆರೆಯಲು ( ಸ್ವಚ್ಚತೆ ಉದ್ದೇಶಕ್ಕಾಗಿ ) ಅನುವು ಮಾಡಿಕೊಳ್ಳುವುದು.

Scanned with CamScanner

2. ಈ ಹಿಂದೆ ತಿಳಿಸಿರುವಂತೆ ಮಹಿಳಾ ಶೌಚಾಲಯದಲ್ಲಿ Sanitary burning ಉಪಕರಣವನ್ನು ಅಳವಡಿಸುವುದು.
3. KSRTC ಫುಟ್ ಪಾತ್ ನಲ್ಲಿ ನಿರ್ಮಿಸಲು ಉದ್ದೇಶಿಸಲಾದ Butterfly roof sheet ನಲ್ಲಿ ಸೂಕ್ತವಾದ lights ಗಳನ್ನು ಪೂರ್ಣ ಉದ್ದಕ್ಕೂ ಅಳವಡಿಸುವುದು..
4. ಈ ಹಿಂದೆ B.H ರಸ್ತೆಯಲ್ಲಿ Utility Duct ನಿರ್ಮಿಸಿರುವಂತೆ ಅಶೋಕ ವೃತ್ತದಲ್ಲಿ ನಿರ್ಮಿಸುವ concrete `drain ಪಕ್ಕದಲ್ಲಿ ವಿದ್ಯುತ್ cable ಗಳನ್ನು ಹಾಯಿಸುವ RCC utility duct ಗಳನ್ನು ಅಳವಡಿಸಿಕೊಳ್ಳುವುದು.
5. ವಿಕಲ ಚೇತನರಿಗೆ ಪ್ರತ್ಯೇಕವಾಗಿ ಶೌಚಾಲಯಗಳನ್ನು ನಿರ್ಮಿಸಲು ಅವಕಾಶ ಮಾಡಿ ಕೊಳ್ಳಲಾಗಿತ್ತು. ಇದರ ಬದಲು ಹಾಲಿ ನಿರ್ಮಿಸುವ ಪುರುಷ ಮತ್ತ ಮಹಿಳಾ ಶೌಚಾಲಯಗಳಲ್ಲಿಯೇ ವಿಕಲ ಚೇತನರಿಗೂ ಸಹ ಅವಕಾಶ ಮಾಡಿಕೊಳ್ಳಲು ಸಭೆಯು ತಿಳಿಸಲಾಯಿತು.
6. ವಾಹನ ನಿಲುಗಡೆಯ ಪ್ಲಾಟ್ ಫಾರಂ ಅಂಚುಗಳನ್ನು Angular ಪಟ್ಟಿಗಳನ್ನು ಬಳಸಿ ರಕ್ಷಿಸಿಕೊಳ್ಳುವುದು.
7. ಕಾರ್ಯಪಾಲಕ ಅಭಿಯಂತರರು ಮತ್ತು PMC ರವರು ಸ್ಥಳೀಯ KSRTC Divisional Controller ರವರೊಂದಿಗೆ ಚರ್ಚಿಸಿದಂತೆ OPTION-1(Butterfly Truss) ಛಾವಣಿಯನ್ನು ಅಂದಾಜಿನಲ್ಲಿ ಅಳವಡಿಸುವುದು.

ಪಿ.ಎಂ.ಸಿ ರವರು ಮೇಲ್ಕಂಡ ಅಂಶಗಳನ್ನು ಮರುಪರಿಶೀಲಿಸಿ, ಪರಿಷ್ಕೃತ ಅಂದಾಜನ್ನು ಜರೂರಾಗಿ ಸಲ್ಲಿಸಲು ತಿಳಿಸಲಾಯಿತು ಹಾಗೂ ಮರು ಪರಿಷ್ಕೃತ ಅಂದಾಜು ಪಟ್ಟಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಮುಖ್ಯ ಅಭಿಯಂತರರು,
ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್,
ಶಿವಮೊಗ್ಗ

ಪ್ರತಿಯನ್ನು,

1. ವ್ಯವಸ್ಥಾಪಕ ನಿರ್ದೇಶಕರು, ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ ರವರ ಮಾಹಿತಿಗಾಗಿ.
2. ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಶಿವಮೊಗ್ಗ ರವರ ಮಾಹಿತಿಗಾಗಿ.
3. ಕಾರ್ಯಪಾಲಕ ಅಭಿಯಂತರರು, ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ ರವರ ಮಾಹಿತಿಗಾಗಿ.
4. ಕಾರ್ಯಪಾಲಕ ಅಭಿಯಂತರರು, ಮೆಸ್ಕಾಂ, ಶಿವಮೊಗ್ಗ ರವರ ಮಾಹಿತಿಗಾಗಿ.
5. ಕಾರ್ಯಪಾಲಕ ಅಭಿಯಂತರರು, KUWS&DB, ನೀರು ಸರಬರಾಜು, ಶಿವಮೊಗ್ಗ ರವರ ಮಾಹಿತಿಗಾಗಿ.
6. ಕಾರ್ಯಪಾಲಕ ಅಭಿಯಂತರರು, KUWS&DB, ಒಳಚರಂಡಿ, ಶಿವಮೊಗ್ಗ ರವರ ಮಾಹಿತಿಗಾಗಿ.
7. ಕಾರ್ಯಪಾಲಕ ಅಭಿಯಂತರರು, 1 & 2 ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ, ರವರ ಮಾಹಿತಿಗಾಗಿ.
8. ಶ್ರೀ ಪ್ರಾಣೇಶ್ ಪಿ.ಟಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ ರವರ ಮಾಹಿತಿಗಾಗಿ.
9. ಕವನ ಟಿ.ಡಿ ಸಹಾಯಕ ಅಭಿಯಂತರರು, ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್, ಶಿವಮೊಗ್ಗ ರವರ ಮಾಹಿತಿಗಾಗಿ.
10. ಯೋಜನಾ ತಯಾರಕರು, ಟಾಟಾ ಕನ್ಸಲ್ಟಿಂಗ್ ಇಂಜಿನಿಯರ್ಸ್ ಶಿವಮೊಗ್ಗ, ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

Scanned with CamScanner